:70

# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 479(425) |
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | ಶ್ರೀ ಕಿಶೋರ್ ಕುಮಾರ್ ಪುತ್ತೂರು ( ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 12-12-2024 |
| ಉತ್ತರಿಸುವ ಸಚಿವರು | ಮಾನ್ಯ ಮುಖ್ಯಮಂತ್ರಿಗಳು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕರ್ನಾಟಕ ಲೋಕಸೇವಾ ಆಯೋಗದ ಸುಧಾರಣೆಗೆ ಪಿ.ಸಿ.ಹೋಟಾ ಸಮಿತಿ ನೀಡಿದ ಪ್ರಮುಖ ಶಿಫಾರಸ್ಸುಗಳು ಯಾವುವು; ಸದರಿ ಶಿಫಾರಸ್ಸುಗಳನ್ನು ಸರ್ಕಾರ ಒಪ್ಪಿಕೊಂಡಿದೆಯೇ;(ಮಾಹಿತಿ ಒದಗಿಸಲಾಗುವುದೇ) | ಕರ್ನಾಟಕ ಲೋಕಸೇವಾ ಆಯೋಗದ ಸುಧಾರಣೆಗೆ ಪಿ.ಸಿ.ಹೋಟಾ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ಮಾಡಿರುವ ಪ್ರಮುಖ ಶಿಫಾರಸ್ಸುಗಳು, ಸದರಿ ಶಿಫಾರಸ್ಸುಗಳನ್ನು ಸರ್ಕಾರ ಮತ್ತು ಆಯೋಗವು ಜಾರಿಗೊಳಿಸಿರುವ ಹಾಗೂ ಕೈಗೊಂಡಿರುವ ಕ್ರಮಗಳ ವಿವರಗಳನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |
| ಆ | ಸದರಿ ಸಮಿತಿಯ ಶಿಫಾರಸ್ಸುಗಳನ್ನು ಜಾರಿಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; ಮತ್ತು ಜಾರಿಗೊಳಿಸಿದ ಪ್ರಮುಖ ಶಿಫಾರಸ್ಸುಗಳು ಯಾವುವು? | |

**ಸಂಖ್ಯೆ.ಸಿಆಸುಇ 239 ಎಸ್‌ಎಲ್‌ಎ 2024**

(ಸಿದ್ದರಾಮಯ್ಯ)
ಮುಖ್ಯಮಂತ್ರಿ

# ಅನುಬಂಧ

| ಸಮಿತಿಯ ಶಿಫಾರಸ್ಸಿನಲ್ಲಿನ ಕ್ರಮ ಸಂಖ್ಯೆ | ಶಿಫಾರಸ್ಸು ಮಾಡಲಾದ ವಿಷಯ | ಶಿಫಾರಸ್ಸಿನಂತೆ ಮಾಡಲಾದ ತಿದ್ದುಪಡಿ |
|---|---|---|
| 21 | ಕರ್ನಾಟಕ ಸರ್ಕಾರದಡಿ ಬರುವ ಗುಂಪು-ಸಿ ಹುದ್ದೆಗಳ ಆಯ್ಕೆಗೆ ಸಂಬಂಧಿಸಿದಂತೆ ಬಹು ಆಯ್ಕೆ ಉತ್ತರಗಳನ್ನು ಒಳಗೊಂಡ ವಸ್ತುನಿಷ್ಠ ಮಾದರಿಯ ಪರೀಕ್ಷೆಯ ಆಧಾರದ ಮೇಲೆ ಮಾತ್ರ ಯಶಸ್ವಿ ಅಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು ಅವರ ಸಾಧನೆಗೆ ತಕ್ಕಂತೆ ತಯಾರಿಸುವುದರಿಂದ ಈ ವ್ಯವಸ್ಥೆಗೆ ಪ್ರಮುಖ ಪರಿಷ್ಕರಣೆಯ ಅವಶ್ಯಕತೆಯಿಲ್ಲವೆಂಬುದು ಸಮಿತಿಯ ಅಭಿಪ್ರಾಯವಾಗಿದೆ. ಅಭ್ಯರ್ಥಿಗಳು ಆಪ್ಟಿಕಲ್ ಮಾರ್ಕ್ ರೀಡರ್ (ಓ.ಎಂ.ಆರ್.) ಉತ್ತರ ಪತ್ರಿಕೆಗಳಲ್ಲಿ ಬಾಲ್ ಪಾಯಿಂಟ್ ಪೆನ್ನಿನಿಂದ ಷೇಡ್ ಮಾಡಿದ ಉತ್ತರಗಳನ್ನು ಓ.ಎಂ.ಆರ್. ಮೂಲಕ ಪ್ರವಹಿಸಿ ಸರಿಯಾದ ಉತ್ತರಗಳ ಹಾಗೂ ಅಭ್ಯರ್ಥಿಯ ಅಂಕಗಳನ್ನು ತಿಳಿಯಲಾಗುತ್ತದೆ. ಪ್ರತಿ ಅಭ್ಯರ್ಥಿಯು ಪಡೆಯುವ ಒಟ್ಟು ಅಂಕಗಳನ್ನು ನಿರ್ಧರಿಸುವ ಈ ವಸ್ತುನಿಷ್ಠ ಮಾದರಿಯ ಪರೀಕ್ಷೆಯಲ್ಲಿ ಕನಿಷ್ಠ ಸಾಧ್ಯ ಮಾನವ ಹಸ್ತಕ್ಷೇಪ ಇರುತ್ತದೆ. ಸ್ಪರ್ಧಾತ್ಮಕವಾಗಿ ಸಮರ್ಥ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅಭ್ಯರ್ಥಿಗಳ ತಪ್ಪು ಉತ್ತರಗಳಿಗೆ ಕರ್ನಾಟಕ ಲೋಕಸೇವಾ ಆಯೋಗವು ಋಣಾತ್ಮಕ ಅಂಕಗಳನ್ನು ನೀಡುತ್ತದೆ. ಇತ್ತೀಚಿನ ವರ್ಷಗಳಲ್ಲಿ ಗುಂಪು-ಸಿ ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅನೇಕ ಸಂಖ್ಯೆಗಳಲ್ಲಿ ಅಭ್ಯರ್ಥಿಗಳು ಹಾಜರಾಗುವುದನ್ನು ಸಮಿತಿಯು ಗಮನಿಸಿದೆ. ಕರ್ನಾಟಕ ಸರ್ಕಾರದಡಿ ಬರುವ ಗುಂಪು-ಸಿ ಹುದ್ದೆಗಳ ನೇಮಕಾತಿಯ ವಸ್ತುನಿಷ್ಠ ಮಾದರಿಯ ಪರೀಕ್ಷೆಯಲ್ಲಿ 2012-13ನೇ ಸಾಲಿನಲ್ಲಿ ಸುಮಾರು ಹತ್ತು ಲಕ್ಷ ಅಭ್ಯರ್ಥಿಗಳು ಹಾಜರಾಗಿದ್ದರು. ಇಷ್ಟೊಂದು ಸಂಖ್ಯೆಯಲ್ಲಿ ಅಭ್ಯರ್ಥಿಗಳು ಹಾಜರಾಗುವ ಈ ವಸ್ತುನಿಷ್ಠ ಮಾದರಿಯ ಪರೀಕ್ಷೆ ನಡೆಸಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಹೆಚ್ಚುವರಿ ಸಹಾಯ (ಬೆಂಬಲ) ಬೇಕೇ ಎಂಬ ಬಗ್ಗೆ ಪರೀಶೀಲಿಸುವುದು ಅವಶ್ಯಕವಾಗಬಹುದು. | ಹೋಟಾ ಸಮಿತಿ ಶಿಫಾರಸ್ಸಿನಂತೆ ಆಯೋಗಕ್ಕೆ ಹೆಚ್ಚುವರಿಯಾಗಿ ಸರ್ಕಾರವು ದಿನಾಂಕ:15-11-2022ರ ಆದೇಶದಲ್ಲಿ 34 ಹುದ್ದೆಗಳನ್ನು ಹೊಸದಾಗಿ ಸೃಜಿಸಿರುತ್ತದೆ. ಇದಲ್ಲದೇ, ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು 21 ಹುದ್ದೆಗಳನ್ನು ಸೃಜಿಸಲಾಗಿದೆ. |
| 22 | ಪ್ರಸ್ತುತ ಕೆಲವು ಗುಂಪು-ಸಿ ಹುದ್ದೆಗಳು ಅಂದರೆ ಸಹಕಾರ ಸಂಘಗಳ ನಿರೀಕ್ಷಕರು, ಕಾನೂನು ಮಾಪನ ತಪಾಸಿಕರು, ಔಷಧ ನಿಯಂತ್ರಕರ ಕಛೇರಿಯಲ್ಲಿನ ಪರಿವೀಕ್ಷಕರು, ಉಪ ನೋಂದಣಾಧಿಕಾರಿಗಳು ಮತ್ತು ಇತರರ ಆಯ್ಕೆ ಪ್ರಕ್ರಿಯೆಯಲ್ಲಿ ವಸ್ತುನಿಷ್ಠ ಮಾದರಿಯ ಪರೀಕ್ಷೆಯ ಆಧಾರದ ಮೇಲೆ ಗುರುತಿಸಲಾದ ಅರ್ಹ ಅಭ್ಯರ್ಥಿಗಳಿಗಾಗಿ ವ್ಯಕ್ತಿತ್ವ ಪರೀಕ್ಷೆ ನಡೆಸಲು ಅವಕಾಶವಿರುತ್ತದೆ. ಈ ಹುದ್ದೆಗಳ ಕರ್ತವ್ಯಗಳ ಸ್ವರೂಪದ ಕಾರಣ ಆಯ್ಕೆ ಪ್ರಕ್ರಿಯೆಯಲ್ಲಿ ವ್ಯಕ್ತಿತ್ವ ಪರೀಕ್ಷೆಯನ್ನು | ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿಪಿಎಆರ್ 112 ಎಸ್‌ಸಿಆರ್ 2013, ದಿನಾಂಕ:31-12-2015 ರನ್ವಯ ಗ್ರೂಪ್-ಸಿ ಹುದ್ದೆಗಳಿಗೆ ಸಂದರ್ಶನವನ್ನು ರದ್ದುಪಡಿಸಿ ಕೇವಲ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಆಯ್ಕೆ ಮಾಡಲು ಅಧಿಸೂಚನೆ ಹೊರಡಿಸಲಾಗಿರುತ್ತದೆ. |

| ಸಮಿತಿಯ ಶಿಫಾರಸ್ಸಿನಲ್ಲಿನ ಕ್ರಮ ಸಂಖ್ಯೆ | ಶಿಫಾರಸ್ಸು ಮಾಡಲಾದ ವಿಷಯ | ಶಿಫಾರಸ್ಸಿನಂತೆ ಮಾಡಲಾದ ತಿದ್ದುಪಡಿ |
|---|---|---|
| | ಕಡ್ಡಾಯವಾದ ಘಟಕವೆಂದು ಪರಿಗಣಿಸುವ ಅಗತ್ಯವಿಲ್ಲವೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಕರ್ನಾಟಕ ಸರ್ಕಾರದಲ್ಲಿ ಎಲ್ಲಾ ಗುಂಪು-ಸಿ ಹುದ್ದೆಗಳನ್ನು ವಸ್ತುನಿಷ್ಠ ಮಾದರಿಯ ಪರೀಕ್ಷೆಯ ಮೂಲಕವೇ ನೇಮಿಸಿ ತುಂಬಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. | |
| 25 | ಸ್ಪರ್ಧಾತ್ಮಕ ಪರೀಕ್ಷೆಗಳ ಹಾಗೂ ವ್ಯಕ್ತಿತ್ವ ಪರೀಕ್ಷೆಗಳ ಎಲ್ಲಾ ಗೌಪ್ಯ ವಿಷಯಗಳ ದಾಖಲೆಗಳಿಗೆ ಸಂಬಂಧಿಸಿದಂತೆ ಪ್ರಸ್ತುತ ಕರ್ನಾಟಕ ಲೋಕಸೇವಾ ಆಯೋಗದ ಕಾರ್ಯದರ್ಶಿಯವರು ಮೇಲ್ವಿಚಾರಕ (ಕಸ್ಟೋಡಿಯನ್)ರಾಗಿರುತ್ತಾರೆ. ಸ್ಪರ್ಧಾತ್ಮಕ ಪರೀಕ್ಷೆಗಳ ಹಾಗೂ ವ್ಯಕ್ತಿತ್ವ ಪರೀಕ್ಷೆಗಳ ಎಲ್ಲ ಗೌಪ್ಯ ವಿಷಯಗಳ ಪ್ರಭಾರವನ್ನು ವಹಿಸಲು ಒಂದು ಪರೀಕ್ಷಾ ನಿಯಂತ್ರಕರ ಹೊಸ ಹುದ್ದೆಯನ್ನು ಸೃಜಿಸಲು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಪರೀಕ್ಷಾ ನಿಯಂತ್ರಕರು ಆದಷ್ಟು ಮಟ್ಟಿಗೆ ಹಿರಿಯ ವೇತನ ಶ್ರೇಣಿಯಲ್ಲಿರುವ ನೇರ ನೇಮಕಾತಿ ಮೂಲಕ ಅಖಿಲ ಭಾರತ ಸೇವೆಗೆ ಆಯ್ಕೆಯಾಗಿರುವ ಅಧಿಕಾರಿಯಾಗಿರತಕ್ಕದ್ದು. ಸದರಿಯವರ ಸೇವಾ ಅವಧಿಯು ಕನಿಷ್ಠ ಮೂರು ವರ್ಷಗಳು ಇರತಕ್ಕದ್ದು. ಪರೀಕ್ಷಾ ನಿಯಂತ್ರಕರ ಹುದ್ದೆಯಿಂದ ಅವರನ್ನು ವರ್ಗಾಯಿಸಿ ವರ್ಗಾವಣೆ ಆದೇಶವನ್ನು ಹೊರಡಿಸಿ ಕಾರ್ಯಗತಗೊಳಿಸುವ ಮೊದಲು ಕನಿಷ್ಠ ಮೂರು ತಿಂಗಳ ಒಬ್ಬರನ್ನು ಅಧ್ಯಯನದಲ್ಲಿರಿಸಿರಬೇಕು. | ಸರ್ಕಾರವು ದಿನಾಂಕ:08-10-213ರ ಆದೇಶದಲ್ಲಿ ಭಾರತೀಯ ಆಡಳಿತ ಸೇವೆಯ ಹಿರಿಯ ವೇತನ ಶ್ರೇಣಿಯಲ್ಲಿ ದಿನಾಂಕ:24-09-2013ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಒಂದು ಪರೀಕ್ಷಾ ನಿಯಂತ್ರಕರ ಹುದ್ದೆ(Controller of Examination)ಯನ್ನು ಸೃಜಿಸಲಾಗಿರುತ್ತದೆ. |
| 26 | ಪರೀಕ್ಷಾ ನಿಯಂತ್ರಕರು ಕರ್ನಾಟಕ ಲೋಕಸೇವಾ ಆಯೋಗದ ಕಾರ್ಯದರ್ಶಿಯವರ ಒಟ್ಟಾರೆ ನಿಯಂತ್ರಣದಲ್ಲಿ ಕಾರ್ಯ ನಿರ್ವಹಿಸಬೇಕು; ಆದರೆ ಸ್ಪರ್ಧಾತ್ಮಕ ಪರೀಕ್ಷೆಗಳ ಹಾಗೂ ವ್ಯಕ್ತಿತ್ವ ಪರೀಕ್ಷೆಗಳ ಎಲ್ಲ ಗೌಪ್ಯ ವಿಷಯಗಳ ಮಾಹಿತಿಯು ಏಕಮಾತ್ರವಾಗಿ ಇವರ ಸುಪರ್ದಿನಲ್ಲಿರಬೇಕು; ಇವರು ಈ ವಿಷಯಗಳನ್ನು/ಮಾಹಿತಿಯನ್ನು ಕ.ಲೋ.ಸೇ. ಆಯೋಗದ ಕಾರ್ಯದರ್ಶಿ ಹಾಗೂ ಅಧ್ಯಕ್ಷರೊಡನೆಯೂ ಇಂತಹ ಮಾಹಿತಿಯನ್ನು ತಿಳಿದುಕೊಳ್ಳುವ ಅವಶ್ಯಕತೆಯ (need-to-know) ತತ್ವದ ಆಧಾರದ ಹೊರತಾಗಿ ಹಂಚಿಕೊಳ್ಳುವಂತಿಲ್ಲ | ಸರ್ಕಾರವು ದಿನಾಂಕ:08-10-213ರ ಆದೇಶದಲ್ಲಿ ಭಾರತೀಯ ಆಡಳಿತ ಸೇವೆಯ ಹಿರಿಯ ವೇತನ ಶ್ರೇಣಿಯಲ್ಲಿ ದಿನಾಂಕ:24-09-2013ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಒಂದು ಪರೀಕ್ಷಾ ನಿಯಂತ್ರಕರ ಹುದ್ದೆ(Controller of Examination)ಯನ್ನು ಸೃಜಿಸಲಾಗಿರುತ್ತದೆ.<br><br>ಮುಂದುವರೆದು, ಆಯೋಗದ ಆದೇಶ ಸಂಖ್ಯೆ:ಆಡಳಿತ 1224/2013-14/ಪಿಎಸ್‌ಸಿ, ದಿನಾಂಕ:26-10-2013ರನ್ವಯ ಕರ್ನಾಟಕ ಲೋಕಸೇವಾ ಆಯೋಗದಲ್ಲಿನ ಕಾರ್ಯದರ್ಶಿ ಹಾಗೂ ಪರೀಕ್ಷಾ ನಿಯಂತ್ರಕರಿಗೆ ಶಾಖೆಗಳ ಹಂಚಿಕೆ ಮಾಡಲಾಗಿರುತ್ತದೆ. |
| 28 | ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಐಚ್ಛಿಕ ವಿಷಯಗಳಿಂದ ಉದ್ಭವವಾಗುವ ವಿಷಯ ಪಕ್ಷಪಾತವನ್ನು ಅಭ್ಯರ್ಥಿಗಳಿಗೆ ಲೇಖನಿ-ಹಾಗೂ-ಕಾಗದದ ಒಂದೇ ಮಟ್ಟದ ಮಾದರಿಯ ಸಮಾನ ಭೂಮಿಕೆಯನ್ನು | ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ಸ್‌ಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) ನಿಯಮಗಳು,1997ರ ನಿಯಮ 6ಕ್ಕೆ **ಸರ್ಕಾರದ ಅಧಿಸೂಚನೆ** |

| ಸಮಿತಿಯ ಶಿಫಾರಸ್ಸಿನಲ್ಲಿನ ಕ್ರಮ ಸಂಖ್ಯೆ | ಶಿಫಾರಸ್ಸು ಮಾಡಲಾದ ವಿಷಯ | ಶಿಫಾರಸ್ಸಿನಂತೆ ಮಾಡಲಾದ ತಿದ್ದುಪಡಿ |
|---|---|---|
| | ಸೃಜಿಸಿ ಸಾಮಾನ್ಯ ವಿಷಯಗಳಿಗೆ ಸಂಬಂಧಿಸಿದ ಹಾಗೂ ಸಾಮಾನ್ಯ ಪಠ್ಯಕ್ರಮದೊಂದಿಗೆ ಸಾಂಪ್ರದಾಯಿಕ ಪ್ರಬಂಧದ ಮಾದರಿಯ ಪರೀಕ್ಷೆಯನ್ನು ನಿಗದಿಪಡಿಸುವ ಮೂಲಕ ನಿವಾರಿಸಬಹುದು. | **ಸಂಖ್ಯೆ:ಸಿಆಸುಇ 235 ಎಸ್‌ಆರ್ ಆರ್ 2013,ದಿ:24-11-2014** ರಂತೆ ತಿದ್ದುಪಡಿ ಮಾಡಲಾಗಿದೆ.<br><br>**ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ 151 ಸೇಲೋಸೇ 2014, ದಿ:04-06-2020** ರಲ್ಲಿ ವ್ಯಕ್ತಿತ್ವ ಪರೀಕ್ಷೆಯ ಅಂಕಗಳನ್ನು 200 ರಿಂದ50ಕ್ಕೆ ಇಳಿಸಲಾಗಿದೆ ಹಾಗೂ ಐಚ್ಛಿಕ ವಿಷಯಗಳನ್ನು ತೆಗೆದುಹಾಕಲಾಗಿದೆ.<br><br>**ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ 20 ಎಸ್‌ಎಸ್‌ಸಿ 2022, ದಿ:12-04-2022** ರಲ್ಲಿ ಸಂದರ್ಶನ ಅಂಕವನ್ನು 50 ರಿಂದ 25ಕ್ಕೆ ಇಳಿಸಲಾಗಿರುತ್ತದೆ ಮತ್ತು ಒಟ್ಟು ಅಂಕಗಳನ್ನು 1300 ರಿಂದ 1275ಕ್ಕೆ ಇಳಿಸಲಾಗಿದೆ. |
| 27 ರಿಂದ 39 | ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಗಳ ಪೂರ್ವಭಾವಿ ಹಾಗೂ ಮುಖ್ಯ ಪರೀಕ್ಷೆಯ ಪಠ್ಯಕ್ರಮವನ್ನು ಪರಿಷ್ಕರಿಸುವಂತೆ ತಿಳಿಸಲಾಗಿದೆ. | ಗೆಜೆಟೆಡ್ ಪ್ರೋಬೇಷನರ್ಸ್ ನೇಮಕಾತಿಗೆ ಸಂಬಂಧಿಸಿದ ಪೂರ್ವಭಾವಿ ಹಾಗೂ ಮುಖ್ಯ ಪರೀಕ್ಷೆಯ ಪಠ್ಯಕ್ರಮವನ್ನು ಈಗಿರುವ ವಿವಿಧ ಐಚ್ಛಿಕ ವಿಷಯಗಳಲ್ಲಿ ಪರೀಕ್ಷೆ ಬರೆಯಬಹುದಾದ ಪದ್ಧತಿಯನ್ನು ಕೈಬಿಟ್ಟು ಏಕರೂಪದ ಪಠ್ಯಕ್ರಮವನ್ನು ಅಳವಡಿಸಿಕೊಳ್ಳುವಂತೆ ಕೋರಿ ಪ್ರಸ್ತಾವಿತ ಪಠ್ಯಕ್ರಮವನ್ನು ಗೆಜೆಟೆಡ್ ಪ್ರೋಬೇಷನರ್ಸ್ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ) ನಿಯಮಗಳು 1997ರ ಷೆಡ್ಯೂಲ್ 2ರ ಸೆಕ್ಷನ್ 01 ಮತ್ತು 02ರಲ್ಲಿ ನಿಗಧಿ ಪಡಿಸಿರುವ ನಿಯಮ/ಪಠ್ಯಕ್ರಮವನ್ನು ಪರಿಷ್ಕೃತಗೊಳಿಸುವಂತೆ ಸರ್ಕಾರಕ್ಕೆ ಪತ್ರ ಬರೆಯಲಾಗಿತ್ತು. ಅದರಂತೆ ದಿನಾಂಕ:28-09-2011ರ ಅಧಿಸೂಚನೆಯಲ್ಲಿ ಪೂರ್ವಭಾವಿ ಪರೀಕ್ಷೆಗೆ ಪಠ್ಯಕ್ರಮವನ್ನು ತಿದ್ದುಪಡಿ ಮಾಡಲಾಗಿರುತ್ತದೆ ಹಾಗೂ ದಿನಾಂಕ: 24-11-2014ರ ಅಧಿಸೂಚನೆಯಲ್ಲಿ ಮುಖ್ಯಪರೀಕ್ಷೆಯ ಪಠ್ಯಕ್ರಮಕ್ಕೆ ತಿದ್ದುಪಡಿ ಮಾಡಲಾಗಿರುತ್ತದೆ ಮತ್ತು ದಿನಾಂಕ:04-06-2020ರ ಸರ್ಕಾರದ ಅಧಿಸೂಚನೆಯಲ್ಲಿ ಗೆಜೆಟೆಡ್ ಪ್ರೋಬೇಷನರ್ಸ್ ನೇಮಕಾತಿಯ ಮುಖ್ಯಪರೀಕ್ಷೆಯ ಪಠ್ಯಕ್ರಮದಲ್ಲಿ ಐಚ್ಛಿಕ ವಿಷಯಗಳನ್ನು ತೆಗೆದು ಹಾಕಲಾಗಿರುತ್ತದೆ ಹಾಗೂ ವ್ಯಕ್ತಿತ್ವ ಪರೀಕ್ಷೆಯ ಅಂಕಗಳನ್ನು 25ಕ್ಕೆ ಇಳಿಸಿ ತಿದ್ದುಪಡಿ ಮಾಡಲಾಗಿರುತ್ತದೆ. ಪ್ರಸ್ತುತ ನೇಮಕಾತಿಯಲ್ಲಿ ಇದನ್ನು ಅಳವಡಿಸಿಕೊಳ್ಳಲಾಗಿರುತ್ತದೆ. |
| 40 | ಗೆಜೆಟೆಡ್ ಪ್ರೊಬೇಷನರ್ಸ್ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ) ನಿಯಮಗಳು 1997ರ | ದಿನಾಂಕ:17-04-2021ರ ಅಧಿಸೂಚನೆಯಲ್ಲಿ ಪೂರ್ವಭಾವಿ ಪರೀಕ್ಷೆಯಿಂದ ಮುಖ್ಯ |

| ಸಮಿತಿಯ ಶಿಫಾರಸ್ಸಿನಲ್ಲಿನ ಕ್ರಮ ಸಂಖ್ಯೆ | ಶಿಫಾರಸ್ಸು ಮಾಡಲಾದ ವಿಷಯ | ಶಿಫಾರಸ್ಸಿನಂತೆ ಮಾಡಲಾದ ತಿದ್ದುಪಡಿ |
| --- | --- | --- |
| | ನಿಯಮಗಳನ್ವಯ ಪೂರ್ವಭಾವಿ ಪರೀಕ್ಷೆಯಿಂದ ಮುಖ್ಯ ಪರೀಕ್ಷೆಗೆ 1:20 ಅನುಪಾತದಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತಿದ್ದು, ಇದನ್ನು ಪ್ರತಿಯೊಂದು ರಿಕ್ತ ಸ್ಥಾನಕ್ಕೆ 14 ರಿಂದ 15ರ ಪ್ರಮಾಣಕ್ಕೆ ಪರಿಷ್ಕರಿಸುವಂತೆ ಸೂಚಿಸಲಾಗಿದೆ. | ಪರೀಕ್ಷೆಗೆ 1:15 ಅನುಪಾತದಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಂತೆ ತಿದ್ದುಪಡಿ ಮಾಡಲಾಗಿರುತ್ತದೆ. |
| 43 | ಕರ್ನಾಟಕ ಸರ್ಕಾರವು ಪ್ರತಿ ನೇಮಕಾತಿ ವರ್ಷಕ್ಕೆ ಸಂಬಂಧಿಸಿದಂತೆ, ಹಿಂದಿನ ಕ್ಯಾಲೆಂಡರ್ ವರ್ಷದ ಅಂತ್ಯದಲ್ಲಿ ಹುದ್ದೆಗಳ/ಸೇವೆಗಳ ನೇಮಕಾತಿಗಾಗಿ ಕೋರಿಕೆಗಳನ್ನು ಸಲ್ಲಿಸತಕ್ಕದ್ದು ಮತ್ತು ಪ್ರತಿ ನೇಮಕಾತಿ ವರ್ಷದ ಜನವರಿ ಅಥವಾ ಫೆಬ್ರವರಿ ತಿಂಗಳಿನಲ್ಲಿ ಗೆಜೆಟೆಡ್ ಪ್ರೊಬೆಷನರುಗಳ ಪರೀಕ್ಷೆ ಮತ್ತು ಗ್ರೂಪ್-ಸಿ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಧಿಸೂಚನೆಯನ್ನು ಹೊರಡಿಸತಕ್ಕದ್ದೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. | ಆಡಳಿತ ಇಲಾಖೆಗಳು ಪ್ರತಿ ವರ್ಷ ನೇಮಕಾತಿ ಪ್ರಸ್ತಾವನೆ ಸಲ್ಲಿಸಿದಲ್ಲಿ ಅದರಂತೆಯೇ ನೇಮಕಾತಿ ಪ್ರಕ್ರಿಯೆ ಜರುಗಿಸಲು ಆಯೋಗವು ಕ್ರಮವಹಿಸುತ್ತದೆ. |
| 45,46,47 | ಅಭ್ಯರ್ಥಿಗಳು ಮುಖ್ಯ ಪರೀಕ್ಷೆಯಲ್ಲಿ ಗಳಿಸಿರುವ ಒಟ್ಟು ಅಂಕಗಳನ್ನು ಆಯೋಗವು ಪ್ರಕಟಿಸುತ್ತಿದ್ದು ಇದನ್ನು ರದ್ದು ಪಡಿಸುವಂತೆ ಶಿಫಾರಸ್ಸು ಮಾಡಲಾಗಿರುತ್ತದೆ. | ಆಯೋಗವು ಪ್ರಸ್ತುತ ಚಾಲ್ತಿಯಲ್ಲಿರುವ ಕರ್ನಾಟಕ ಲೋಕ ಸೇವಾ ಆಯೋಗ (ಪ್ರಕಾರ್ಯಗಳು) ನಿಯಮಗಳು 1973 ರನ್ವಯ ವ್ಯಕ್ತಿತ್ವ ಪರೀಕ್ಷೆಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸುವ ಸಂದರ್ಭದಲ್ಲಿ ಅಭ್ಯರ್ಥಿಗಳು ಮುಖ್ಯ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳನ್ನು ಪ್ರಕಟಿಸಬಾರದೆಂದು ದಿನಾಂಕ: 30-10-2013ರ ಅಧಿಸೂಚನೆಯಲ್ಲಿ ತಿದ್ದುಪಡಿ ಮಾಡಲಾಗಿರುತ್ತದೆ ಹಾಗೂ ದಿನಾಂಕ:24-11-2014ರ ಅಧಿಸೂಚನೆಯಲ್ಲಿ ಗೆಜೆಟೆಡ್ ಪ್ರೊಬೇಷನರ್ಸ್ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ) ನಿಯಮಗಳು 1997ರ ನಿಯಮಗಳಿಗೆ ಮುಖ್ಯ ಪರೀಕ್ಷೆಯ ಮತ್ತು ವ್ಯಕ್ತಿತ್ವ ಪರೀಕ್ಷೆಯ ಅಂಕಗಳನ್ನು ಅಂತಿಮ ಆಯ್ಕೆಪಟ್ಟಿಯೊಂದಿಗೆ ಪ್ರಕಟಿಸಬೇಕೆಂದು ತಿದ್ದುಪಡಿ ಮಾಡಲಾಗಿರುತ್ತದೆ. |
| 48 | ಕರ್ನಾಟಕ ಲೋಕಸೇವಾ ಆಯೋಗ (ಪ್ರಕಾರ್ಯಗಳು) ನಿಯಮಗಳು, 1973ಕ್ಕೆ ಹಿಂದೆ ಉಲ್ಲೇಖಿಸಿದ ದಿನಾಂಕ:26-09-1978ರ ಅಧಿಸೂಚನೆಯನ್ವಯ ಮಾಡಿದ ತಿದ್ದುಪಡಿಯನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ರದ್ದುಪಡಿಸಲು ಸಮಿತಿಯು ಶಿಫಾರಸ್ಸು ಮಾಡುತ್ತದೆ. | ಅಧಿಸೂಚನೆ ಸಂಖ್ಯೆ:ಡಿಪಿಎಆರ್ 30 ಎಸ್ ಎಸ್‌ಸಿ 2012, ದಿನಾಂಕ:30-10-2013ರಂತೆ ಲಿಖಿತ/ವ್ಯಕ್ತಿತ್ವ ಪರೀಕ್ಷೆಯ ಅಂಕಗಳ ಗೋಪ್ಯತೆಯ ಕುರಿತು ಕ್ರಮವಹಿಸಲಾಗುತ್ತಿದೆ. |
| 52 | ಕೇಂದ್ರ ಲೋಕ ಸೇವಾ ಆಯೋಗದ ಸಿವಿಲ್ ಸೇವಾ ಪರೀಕ್ಷೆಗಳಿಗೆ ನಡೆಸುವ ಪರೀಕ್ಷೆಗೆ ಸಂಬಂಧಿಸಿದಂತೆ ಅಧಿಸೂಚಿಸುವ ವಿವರಣಾ ಪತ್ರಿಕೆಯಲ್ಲಿ ವ್ಯಕ್ತಿತ್ವ ಪರೀಕ್ಷೆ ನಡೆಸುವ ಬಗ್ಗೆ ಮಾರ್ಗಸೂಚನೆಗಳನ್ನು ನೀಡಿರುವಂತೆ ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಗಳ | ಹೋಟಾ ಸಮಿತಿ ಶಿಫಾರಸ್ಸಿನಂತೆ ವ್ಯಕ್ತಿತ್ವ ಪರೀಕ್ಷೆಯನ್ನು ನಡೆಸುವ ವಿಧಿ ವಿಧಾನವನ್ನು ದಿನಾಂಕ:16-12-2016ರ ಅಧಿಸೂಚನೆಯಲ್ಲಿ ತಿದ್ದುಪಡಿಗೊಳಿಸಿರುವಂತೆ ಪ್ರಸ್ತುತ |

| ಸಮಿತಿಯ ಶಿಫಾರಸ್ಸಿನಲ್ಲಿನ ಕ್ರಮ ಸಂಖ್ಯೆ | ಶಿಫಾರಸ್ಸು ಮಾಡಲಾದ ವಿಷಯ | ಶಿಫಾರಸ್ಸಿನಂತೆ ಮಾಡಲಾದ ತಿದ್ದುಪಡಿ |
|---|---|---|
| | ಪರೀಕ್ಷೆಗಳಿಗೆ ಅಂತಹ ಮಾರ್ಗಸೂಚನೆಗಳನ್ನು ಅಳವಡಿಸುವುದು ಸೂಕ್ತವಾಗಿರುತ್ತದೆಂದು ಶಿಫಾರಸ್ಸು ನೀಡಿರುತ್ತಾರೆ. | ನೇಮಕಾತಿಗಳಲ್ಲಿ ಅಳವಡಿಸಿಕೊಳ್ಳಲಾಗುತ್ತಿದೆ. |
| 53 | ಅಭ್ಯರ್ಥಿಗಳ ಅರ್ಹತೆಯನ್ನು ನಿರ್ಧರಿಸುವಾಗ ಸಾಧ್ಯವಾದಷ್ಟು ಮಟ್ಟಿಗೆ ವೈಯಕ್ತಿಕತೆಯನ್ನು ತೊಡೆದುಹಾಕುವ ದೃಷ್ಟಿಯಿಂದ ಕರ್ನಾಟಕ ಲೋಕಸೇವಾ ಆಯೋಗವು ವ್ಯಕ್ತಿತ್ವ ಪರೀಕ್ಷಾ ಮಂಡಳಿಗಳ ಅಧ್ಯಕ್ಷರು ಮತ್ತು ಸಲಹೆಗಾರರುಗಳಿಗೆ ಒಂದು ಟಿಪ್ಪಣಿಯನ್ನು ಸುತ್ತಿಸುವುದರ ಮುಖಾಂತರ ವ್ಯಕ್ತಿತ್ವ ಪರೀಕ್ಷೆಯಲ್ಲಿ ಅಭ್ಯರ್ಥಿಗಳ ಪ್ರದರ್ಶನದ ಆಧಾರದ ಮೇಲೆ ಅವರುಗಳನ್ನು ಅಸಾಧಾರಣ (ಶೇ.70 ಮತ್ತು ಅದಕ್ಕಿಂತ ಹೆಚ್ಚು); ಅತ್ಯುತ್ತಮ (ಶೇ.60-70); ಉತ್ತಮ (ಶೇ:50-60); ಸಾಧಾರಣ (ಶೇ.40-50); ಮತ್ತು ಸಾಧಾರಣಕ್ಕಿಂತ ಕಡಿಮೆ (ಶೇ.40ಕ್ಕಿಂತ ಕಡಿಮೆ);ಎಂದು ವರ್ಗೀಕರಿಸಬೇಕು. | ಅಧಿಸೂಚನೆ ಸಂಖ್ಯೆ:ಡಿಪಿಎಆರ್ 151 ಸೆಲೋಸೆ 2014, ದಿನಾಂಕ:04-06-2020ರ ನಿಯಮಗಳಲ್ಲಿ "provided that, in case marks so awarded in the Personality test is less than 40% are exceeds more than 80%, the Interview Board Members shall record the reasons for such award" ಎಂದು ತಿದ್ದುಪಡಿ ಮಾಡಲಾಗಿರುತ್ತದೆ. |
| 54 | ವ್ಯಕ್ತಿತ್ವ ಪರೀಕ್ಷಾ ಮಂಡಳಿಯಿಂದ ವ್ಯಕ್ತಿತ್ವ ಪರೀಕ್ಷೆಗೆ ಒಳಗಾದ ಅಭ್ಯರ್ಥಿಯು, ವ್ಯಕ್ತಿತ್ವ ಪರೀಕ್ಷೆಯ ಸ್ಥಳದಿಂದ ನಿರ್ಗಮಿಸಿದ ನಂತರ, ವ್ಯಕ್ತಿತ್ವ ಪರೀಕ್ಷಾ ಮಂಡಳಿಯ ಅಧ್ಯಕ್ಷರು ಪ್ರತಿಯೊಬ್ಬ 4 ಸಲಹೆಗಾರರುಗಳನ್ನು ವ್ಯಕ್ತಿತ್ವ ಪರೀಕ್ಷೆಯಲ್ಲಿ ಅಭ್ಯರ್ಥಿಯು ನೀಡಿದ ಪ್ರದರ್ಶನದ ಬಗ್ಗೆ ಮತ್ತು ಶ್ರೇಣಿ ನೀಡುವ ಬಗ್ಗೆ ಅವರುಗಳ ಅಭಿಪ್ರಾಯವನ್ನು ಪಡೆಯತಕ್ಕದ್ದು. ಸಲಹೆಗಾರರು ಅಭರ್ಥಿಯು ವ್ಯಕ್ತಿತ್ವ ಪರೀಕ್ಷೆಯಲ್ಲಿ ಗಳಿಸಬಹುದಾದ ಅಂಕಗಳ ಬಗ್ಗೆ ಮಂಡಳಿಯ ಅಧ್ಯಕ್ಷರೊಡನೆ ಚರ್ಚಿಸತಕ್ಕದ್ದು. ವ್ಯಕ್ತಿತ್ವ ಪರೀಕ್ಷೆಯಲ್ಲಿ ಅಭ್ಯರ್ಥಿಗೆ ಈ ಕೆಳಕಂಡ ಸೂತ್ರದನ್ವಯ ಅಂಕಗಳನ್ನು ನೀಡಬಹುದು:- ಮಂಡಳಿಯ ಅಧ್ಯಕ್ಷರು ಮತ್ತು 4 ಸಲಹೆಗಾರರು ವ್ಯಕ್ತಿತ್ವ ಪರೀಕ್ಷೆಗೆ ನಿಗದಿಪಡಿಸಿದ ಒಟ್ಟು ಅಂಕಗಳಲ್ಲಿ ಪ್ರತ್ಯೇಕವಾಗಿ ಅಭ್ಯರ್ಥಿಗೆ ಅಂಕಗಳನ್ನು ಹಂಚಿಕೆ ಮಾಡುವುದು; ವ್ಯಕ್ತಿತ್ವ ಪರೀಕ್ಷೆಯಲ್ಲಿ ಅಭ್ಯರ್ಥಿಯು ಗಳಿಸುವ ಒಟ್ಟು ಅಂಕಗಳನ್ನು ಭಾಗಿಸುವುದರ ಮುಖಾಂತರ ಸರಾಸರಿ ಆಧಾರದ ಮೇಲೆ ನಿರ್ಧರಿಸತಕ್ಕದ್ದು (ಮಂಡಳಿಯಲ್ಲಿನ ಸದಸ್ಯರು ಒಂದು ಕಾಗದದಲ್ಲಿ ದಾಖಲಿಸಿದ ಅಂಕಗಳನ್ನು ಕೂಡುವುದರ ಮುಖಾಂತರ). ಆ ನಂತರ ಶೇಖಡಾವಾರು ಪಥ ಬದಲಾವಣೆ (ಗರಿಷ್ಠ) ಪ್ರತಿಯೊಬ್ಬ ಸದಸ್ಯರು ನೀಡಿದ ಸರಾಸರಿ ಅಂಕಗಳನ್ನು ಲೆಕ್ಕ ಹಾಕಿ ಕೋಷ್ಟಕಪಡಿಸತಕ್ಕದ್ದು. ವ್ಯಕ್ತಿತ್ವ ಪರೀಕ್ಷಾ ಮಂಡಳಿಯಲ್ಲಿನ ಇಬ್ಬರು ಸದಸ್ಯರುಗಳು ಅಭ್ಯರ್ಥಿಗೆ ನೀಡಿರುವ ಅಂಕಗಳು ಸರಾಸರಿ ಅಂಕಗಳಿಗಿಂತ ಹೆಚ್ಚಿನ ಪಥ ಬದಲಾವಣೆಯಾದಲ್ಲಿ, ಆ ಅಂಕಗಳನ್ನು ವ್ಯಕ್ತಿತ್ವ ಪರೀಕ್ಷೆಯಲ್ಲಿ ಅಭ್ಯರ್ಥಿಯ ಅಂತಿಮ ಅಂಕವನ್ನು ಲೆಕ್ಕ ಹಾಕುವುದಕ್ಕೆ ಪರಿಗಣಿಸುವಂತಿಲ್ಲ. ವ್ಯಕ್ತಿತ್ವ ಪರೀಕ್ಷಾ ಮಂಡಳಿಯಲ್ಲಿನ ಉಳಿದ 3 ಸದಸ್ಯರುಗಳು | ಅಧಿಸೂಚನೆ ಸಂಖ್ಯೆ:ಡಿಪಿಎಆರ್ 32 ಸೆಲೋಸೆ 2014 (ಪಿ-1), ದಿನಾಂಕ:16-12-2016ರ ನಿಯಮಗಳನ್ನು ಅನುಸರಿಸಲಾಗುತ್ತಿದೆ. |

| ಸಮಿತಿಯ ಶಿಫಾರಸ್ಸಿನಲ್ಲಿನ ಕ್ರಮ ಸಂಖ್ಯೆ | ಶಿಫಾರಸ್ಸು ಮಾಡಲಾದ ವಿಷಯ | ಶಿಫಾರಸ್ಸಿನಂತೆ ಮಾಡಲಾದ ತಿದ್ದುಪಡಿ |
|---|---|---|
| | ನೀಡುವ ಅಂಕಗಳನ್ನು ಗಣನೆಗೆ ತೆಗೆದುಕೊಂಡು ಅಭ್ಯರ್ಥಿಯ ಸರಾಸರಿ ಅಂಕಗಳನ್ನು ಲೆಕ್ಕ ಹಾಕತಕ್ಕದ್ದು. ಈ ಸರಾಸರಿ ಅಂಕವು ಅಭ್ಯರ್ಥಿಯು ವ್ಯಕ್ತಿತ್ವ ಪರೀಕ್ಷೆಯಲ್ಲಿ ಅಭ್ಯರ್ಥಿಗೆ ನೀಡುವ ಅಂಕಗಳನ್ನು ನಿರ್ಧರಿಸಬಹುದಾದ ಕಾರ್ಯವಿಧಾನವನ್ನು ವಿವರಿಸುವ ಟಿಪ್ಪಣಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ. | |
| 55 | ಈಗಿರುವಂತೆ ಪ್ರತಿ ಒಂದು ರಿಕ್ತ ಸ್ಥಾನಕ್ಕೆ 3 ಅಭ್ಯರ್ಥಿಗಳ ಅನುಪಾತದಲ್ಲಿ ವ್ಯಕ್ತಿತ್ವ ಪರೀಕ್ಷೆಗೆ ಅಭ್ಯರ್ಥಿಗಳನ್ನು ಕರೆಯತಕ್ಕದ್ದು. | ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ಸ್‌ಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) ನಿಯಮಗಳು,1997ರ ಷೆಡ್ಯೂಲ್-11 ಸೆಕ್ಷನ್ 1 ರ ಭಾಗ-ಸಿ ವ್ಯಕ್ತಿತ್ವ ಪರಿಕ್ಷೆಗೆ ಸರ್ಕಾರದ **ಅಧಿಸೂಚನೆ ಸಂಖ್ಯೆ:ಸಿಆಸುಇ 32 ಸೇಲೋಸೇ 2014 (ಭಾಗ-1) ದಿ:05.05.2017** ರಂತೆ ವ್ಯಕ್ತಿತ್ವ ಪರೀಕ್ಷೆಗೆ ಒಂದು ಖಾಲಿ ಹುದ್ದೆಗೆ ಮೂರು ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯುವ ಬದಲಾಗಿ ವ್ಯಕ್ತಿತ್ವ ಪರೀಕ್ಷೆಗೆ ಒಂದು ಖಾಲಿ ಹುದ್ದೆಗೆ ಐದು ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯುವ ಕುರಿತು ತಿದ್ದುಪಡಿ ಮಾಡಿ ಕ್ರಮ ವಹಿಸಲಾಗಿದೆ.<br><br>ಸರ್ಕಾರದ ಅಧಿಸೂಚನೆ ಸಂಖ್ಯೆ:**ಸಿಆಸುಇ 23 ಎಸ್‌ಇಆರ್-7 2019, ದಿ:17.01.2020**ರಲ್ಲಿ ಕ್ಲಾಸ್ 2(ಎ)ಅನ್ನು ತೆಗೆದು ಹಾಕಲಾಗಿದ್ದು, ಹಿಂದೆ ಇದ್ದಂತೆ 1:3 ಇರುತ್ತದೆ. |
| 56 | ಕರ್ನಾಟಕ ಲೋಕಸೇವಾ ಆಯೋಗದ ಆವರಣದಲ್ಲಿ ವ್ಯಕ್ತಿತ್ವ ಪರೀಕ್ಷೆಯ ದಿನಾಂಕದಂದು, ಅದನ್ನು ಪ್ರಾರಂಭಿಸುವ ಮೊದಲು ಆಯೋಗದ ಅಧ್ಯಕ್ಷರು ವ್ಯಕ್ತಿತ್ವ ಪರೀಕ್ಷಾ ಮಂಡಳಿಯಲ್ಲಿ ಭಾಗವಹಿಸುವ ಸಲಹೆಗಾರರು ಮತ್ತು ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವ ಸದಸ್ಯರುಗಳ ಸಭೆಯನ್ನು ನಡೆಸತಕ್ಕದ್ದು. ಆಯೋಗದ ಅಧ್ಯಕ್ಷರು, ಪರೀಕ್ಷೆ ನಡೆಸಲು ಹೊರಡಿಸಿದ ಅಧಿಸೂಚನೆಯ ಜೊತೆಗೆ ಹೊರಡಿಸಿದ ವಿವರಣಾ ಪತ್ರದಲ್ಲಿ ನೀಡಿದ ಮಾರ್ಗಸೂಚನೆಗಳ ಹಿನ್ನೆಲೆಯಲ್ಲಿ, ವ್ಯಕ್ತಿತ್ವ ಪರೀಕ್ಷೆ ನಡೆಸುವಾಗ ಅಭ್ಯರ್ಥಿಯಲ್ಲಿ ಗಮನಿಸಬೇಕಾದ ವಿಶೇಷ ಗುಣಲಕ್ಷಣಗಳ ಬಗ್ಗೆ ವಿವರಿಸುವುದು. ಸಿವಿಲ್ ಸೇವೆಗಳ ಹುದ್ದೆಗಳಿಗೆ ಭಾಗವಹಿಸುವ ಅಭ್ಯರ್ಥಿಯಲ್ಲಿರಬೇಕಾದ ವೈಯಕ್ತಿಕ ಗುಣಗಳನ್ನು ನಿರ್ಧರಿಸಲು ವ್ಯಕ್ತಿತ್ವ ಪರೀಕ್ಷಾ ಮಂಡಳಿಗೆ ಸಹಾಯಕವಾಗುವಂತೆ ಅಭ್ಯರ್ಥಿಗಳಿಗೆ ಜ್ಞಾನಾಧಾರಿತ ಪ್ರಶ್ನೆಗಳನ್ನು ಕೇಳಬಾರದೆಂದು ಅಧ್ಯಕ್ಷರು ಸಲಹೆಗಾರರಿಗೆ ಹಾಗೂ ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರಿಗೆ ಸೂಚಿಸಬಹುದು, ಏಕೆಂದರೆ ಲೇಖನಿ ಮತ್ತು ಕಾಗದ | ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ಸ್‌ಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) ನಿಯಮಗಳು,1997ರ ಷೆಡ್ಯೂಲ್-11 ಸೆಕ್ಷನ್ 1 ರ ಭಾಗ-ಸಿ ವ್ಯಕ್ತಿತ್ವ ಪರೀಕ್ಷೆಗೆ **ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ 32 ಸೇಲೋಸೇ 2014(ಭಾಗ-1) ದಿ:16.12.2016** ರಂತೆ ತಿದ್ದುಪಡಿ ಮಾಡಿ ಕ್ರಮ ವಹಿಸಲಾಗಿದೆ. |

| ಸಮಿತಿಯ ಶಿಫಾರಸ್ಸಿನಲ್ಲಿನ ಕ್ರಮ ಸಂಖ್ಯೆ | ಶಿಫಾರಸ್ಸು ಮಾಡಲಾದ ವಿಷಯ | ಶಿಫಾರಸ್ಸಿನಂತೆ ಮಾಡಲಾದ ತಿದ್ದುಪಡಿ |
|---|---|---|
| | ಆಧಾರಿತ ಮುಖ್ಯ ಪರೀಕ್ಷೆಯಲ್ಲಿ ಈ ಗುಣಗಳನ್ನು ಈಗಾಗಲೇ ಪರೀಕ್ಷಿಸಲಾಗಿರುತ್ತದೆ. ವ್ಯಾಪಕವಾಗಿ ಹೇಳುವುದಾದರೆ ಅಭ್ಯರ್ಥಿಗಳಿಗೆ ಕೇಳುವ ಪ್ರಶ್ನೆಗಳು ಆತನ ವೈಯಕ್ತಿಕ ಸಾಮರ್ಥ್ಯಗಳನ್ನು ಹಾಗೂ ನಾಯಕತ್ವ ಗುಣಗಳನ್ನು ಮೌಲ್ಯಮಾಪನ ಮಾಡುವುದಾಗಿರಬೇಕು. ವ್ಯಕ್ತಿತ್ವ ಪರೀಕ್ಷೆಯ ಮೊದಲ ಕೆಲವು ನಿಮಿಷಗಳಲ್ಲಿ ವ್ಯಕ್ತಿತ್ವ ಪರೀಕ್ಷಾ ಮಂಡಳಿಯ ಅಧ್ಯಕ್ಷರು ಅಭ್ಯರ್ಥಿಯು ಹೆದರಿಕೆಯಿಂದ ಹೊರಬರಲು ಮತ್ತು ಸಮುಚಿತವಾಗಿ ಉತ್ತರಿಸಲು ಅನುವಾಗುವಂತೆ ಕೆಲವು ಉಲ್ಲಾಸದಾಯಕವಾದ ಹಾಗೂ ಪರಿಚಿತ ಪ್ರಶ್ನೆಗಳನ್ನು ಕೇಳಬಹುದು. ಪ್ರತಿಯೊಬ್ಬ ಅಭ್ಯರ್ಥಿಗೆ 25 ರಿಂದ 30 ನಿಮಿಷಗಳ ಕಾಲ ವ್ಯಕ್ತಿತ್ವ ಪರೀಕ್ಷೆಯನ್ನು ನಡೆಸುವುದು ಸೂಕ್ತವಾಗಬಹುದು ಹಾಗೂ ಈಗಿನಂತೆ ಪ್ರತಿ ದಿನ 25 ಅಭ್ಯರ್ಥಿಗಳನ್ನು ವ್ಯಕ್ತಿತ್ವ ಪರೀಕ್ಷೆಗೆ ಕರೆಯುವ ಬದಲು ಪೂರ್ವಾಹ್ನ 5 ಹಾಗೂ ಮಧ್ಯಾಹ್ನ 4 ರಂತೆ ಒಟ್ಟು 09 ಅಭ್ಯರ್ಥಿಗಳನ್ನು ವ್ಯಕ್ತಿತ್ವ ಪರೀಕ್ಷೆಗೆ ಕರೆಯಬಹುದು. ಪ್ರತಿ ವಾರ ವ್ಯಕ್ತಿತ್ವ ಪರೀಕ್ಷಾ ಮಂಡಳಿಯ ಸದಸ್ಯರನ್ನು ಹಾಗೂ ಸಲಹೆಗಾರರನ್ನು ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರು ಬದಲಾಯಿಸಬೇಕು ಹಾಗೂ ಹಿಂದಿನ ವಾರದಲ್ಲಿ ಸದಸ್ಯರಿಗೆ ಹಾಗೂ ಸಲಹೆಗಾರರಿಗೆ ವ್ಯಕ್ತಿತ್ವ ಪರೀಕ್ಷೆಯ ಬಗ್ಗೆ ವಿವರಿಸುವಂತೆ ಈ ವಾರವೂ ವ್ಯಕ್ತಿತ್ವ ಪರೀಕ್ಷೆಗಾಗಿ ಬರುವ ಹೊಸ ಸದಸ್ಯರಿಗೆ ಹಾಗೂ ಸಲಹೆಗಾರರಿಗೂ ವಿವರಿಸಬೇಕು. | |
| 57 | ಕರ್ನಾಟಕ ಲೋಕಸೇವಾ ಆಯೋಗವು ನಡೆಸುವ ಯಾವುದೇ ವ್ಯಕ್ತಿತ್ವ ಪರೀಕ್ಷೆಗೆ ಸಂಬಂಧಿಸಿದ ಅಭ್ಯರ್ಥಿಗಳಿಗೆ ಲಿಖಿತ ಮೂಲಕ ಪೂರ್ವಭಾವಿಯಾಗಿ ಸೂಚನೆಯನ್ನು ನೀಡತಕ್ಕದ್ದು. ಸುಮಾರು ಬೆಳಗ್ಗೆ 9:00ಗಂಟೆಗೆ (ಅಭ್ಯರ್ಥಿಗೆ ವ್ಯಕ್ತಿತ್ವ ಪರೀಕ್ಷೆ ನಿಗದಿಪಡಿಸಿರುವ ದಿನಾಂಕದಂದು) ಲಾಟರಿ ಎತ್ತುವುದರ ಮುಖಾಂತರ ಅಭ್ಯರ್ಥಿಯನ್ನು ನಿರ್ದಿಷ್ಟವಾದ ಮಂಡಳಿಗೆ ಹಂಚಿಕೆ ಮಾಡತಕ್ಕದ್ದು, ಕೇಂದ್ರ ಲೋಕಸೇವಾ ಆಯೋಗದಲ್ಲಿನ ವ್ಯಕ್ತಿತ್ವ ಪರೀಕ್ಷಾ ಮಂಡಳಿಯು ನಡೆಸುವ, ಹಠಾತ್ತನೆ ಮಾಡುವ ಈ ಆಯ್ಕೆಯನ್ನು ವ್ಯಕ್ತಿತ್ವ ಪರೀಕ್ಷಾ ಪ್ರಾರಂಭವಾಗುವ ಬೆಳಗ್ಗೆ9.45 ಗಂಟೆಗೆ ಮೊದಲು ಬೆಳಗ್ಗೆ ಸುಮಾರು 9.00 ಗಂಟೆಯ ಸಮಯದಲ್ಲಿ ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರೇ ಉಸ್ತುವಾರಿ ಮಾಡುತ್ತಾರೆ. ಈ ಪದ್ಧತಿಯನ್ನು ಅಳವಡಿಸಿದಲ್ಲಿ ಒಬ್ಬ ನಿರ್ದಿಷ್ಟವಾದ ಅಭ್ಯರ್ಥಿಯನ್ನು ಒಂದು ನಿರ್ದಿಷ್ಟವಾದ ವ್ಯಕ್ತಿತ್ವ ಪರೀಕ್ಷಾ ಮಂಡಳಿಗೆ ಹಂಚಿಕೆ ಮಾಡುವ ಕೈವಾಡವನ್ನು ತೊಡೆದು ಹಾಕಬಹುದು. | ಅಧಿಸೂಚನೆ ಸಂಖ್ಯೆ:ಡಿಪಿಎಆರ್ 32 ಸೆಲೋಸೆ 2014 (ಪಿ-1), ದಿನಾಂಕ:16-12-2016ರ ನಿಯಮಗಳನ್ನು ಅನುಸರಿಸಲಾಗುತ್ತಿದೆ. |
| 58 | ಕರ್ನಾಟಕ ಲೋಕಸೇವಾ ಆಯೋಗವು ಕರ್ನಾಟಕ ಸರ್ಕಾರದಲ್ಲಿನ ತಾಂತ್ರಿಕ ಮತ್ತು ವೈಜ್ಞಾನಿಕ | ಸಂದರ್ಶನವನ್ನು ನಿಗದಿಪಡಿಸಿರುವ ಹುದ್ದೆಗಳಿಗೆ ಚಾಲ್ತಿಯಲ್ಲಿರುವ |

| ಸಮಿತಿಯ ಶಿಫಾರಸ್ಸಿನಲ್ಲಿನ ಕ್ರಮ ಸಂಖ್ಯೆ | ಶಿಫಾರಸ್ಸು ಮಾಡಲಾದ ವಿಷಯ | ಶಿಫಾರಸ್ಸಿನಂತೆ ಮಾಡಲಾದ ತಿದ್ದುಪಡಿ |
|---|---|---|
| | ಹುದ್ದೆಗಳನ್ನು ಪರಿಣಿತರಿಂದ ಆಯ್ಕೆ ಮಾಡಿ ತುಂಬುತ್ತದೆ. ಈ ಹುದ್ದೆಗಳಿಗೆ ಆಯ್ಕೆ ಮಾಡಲು ವ್ಯಕ್ತಿತ್ವ ಪರೀಕ್ಷಾ ಮಂಡಳಿಗಳನ್ನು ರಚಿಸಿರುವ ಕರ್ನಾಟಕ ಲೋಕಸೇವಾ ಆಯೋಗವು ಸಂಬಂಧಿಸಿದ ತಾಂತ್ರಿಕ ಮತ್ತು ವೈಜ್ಞಾನಿಕ ಕ್ಷೇತ್ರಗಳಲ್ಲಿ ಪರಿಣಿತಿ ಹೊಂದಿದ ಹೊರ ರಾಜ್ಯದವರನ್ನು ಸಲಹೆಗಾರರನ್ನಾಗಿ ನೇಮಿಸುವುದು ಸೂಕ್ತವಾಗಿರುತ್ತದೆ. | ನಿಯಮಗಳಲ್ಲಿನ ಸೂಚನೆ / ನಿರ್ದೇಶನದಂತೆ ಸಂದರ್ಶನ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ. |
| 60 | ರಾಜ್ಯ ಲೋಕಸೇವಾ ಆಯೋಗಗಳ ಅಧ್ಯಕ್ಷರು ಮತ್ತು ಸದಸ್ಯರುಗಳ ಸೇವಾ ಷರತ್ತುಗಳನ್ನು ಸಂಬಂಧಿಸಿದ ರಾಜ್ಯಗಳ ರಾಜ್ಯಪಾಲರು ವಿನಿಯಮಗಳನ್ನು ರಚಿಸುವುದರ ಮುಖಾಂತರ ನಿಯಂತ್ರಿಸಲಾಗುತ್ತದೆ. ಪ್ರಸ್ತುತ, ವಿನಿಯಮಗಳ ಅಡಿಯಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರು ಮಾಸಿಕ ರೂ.80,000/- ಮತ್ತು ಸದಸ್ಯರು ಮಾಸಿಕ ರೂ.75,000/-ಗಳ ವೇತನವನ್ನು ಪಡೆಯುತ್ತಾರೆ. ಅಧ್ಯಕ್ಷರು ಮಾಸಿಕ ರೂ.400ರಂತೆ ಆತಿಥ್ಯ ಭತ್ಯೆ ಪಡೆಯುತ್ತಿದ್ದು ಆಯೋಗದ ಸದಸ್ಯರು ಈ ಸೌಲಭ್ಯಕ್ಕೆ ಅರ್ಹರಾಗುವುದಿಲ್ಲ. ವಾರಂಟ್ ಆಫ್ ಪ್ರಿಸಿಡೆನ್ಸ್ ನಲ್ಲಿನ ಸ್ಥಾನಮಾನದ ಬಗ್ಗೆ ಅಧ್ಯಕ್ಷರು ಹಾಗೂ ಸದಸ್ಯರುಗಳಲ್ಲಿ ಅತೃಪ್ತಿಯಿರುತ್ತದೆ. ಅಸ್ತಿತ್ವದಲ್ಲಿರುವ ವಾರಂಟ್ ಆಫ್ ಪ್ರಿಸಿಡೆನ್ಸ್‌ಅನ್ನು ಪರಿಷ್ಕರಣೆಯು ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದ ಒಂದು ಸಂವೇದನಾಶೀಲವಾದ ವಿಷಯವಾಗಿದ್ದು ಇದನ್ನು ಅತಿ ಜಾಗರೂಕತೆಯಿಂದ ನಿಭಾಯಿಸಬೇಕಾಗುತ್ತದೆಯೆಂಬ ಅಂಶವನ್ನು ಸಮಿತಿಯು ಗ್ರಹಿಸಿರುತ್ತದೆ. ಆದರೆ ಒಟ್ಟಾರೆ ಆಡಳಿತದ ದೃಷ್ಟಿಯಲ್ಲಿ ಲೋಕಸೇವಾ ಆಯೋಗದ ಪ್ರಾಮುಖ್ಯತೆಯನ್ನು ಹಾಗೂ ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು ಸಾಂವಿಧಾನಿಕ ಪ್ರಾಧಿಕಾರಿಗಳೆಂಬ ಅಂಶವನ್ನು ಪರಿಗಣಿಸಿ ಅವರನ್ನು ವಾರಂಟ್ ಆಫ್ ಪ್ರಿಸಿಡೆನ್ಸ್‌ನಲ್ಲಿ ಕನಿಷ್ಠ ಪಕ್ಷ ರಾಜ್ಯದಲ್ಲಿರುವ ಶಾಸನಬದ್ಧ ಉನ್ನತ ಮಟ್ಟದ ಪ್ರಾಧಿಕಾರಿಗಳು ಅಂದರೆ ರಾಜ್ಯ ಮಾಹಿತಿ ಆಯೋಗ ಆಯುಕ್ತರು ಹಾಗೂ ಮಾಹಿತಿ ಆಯುಕ್ತರಿಗೆ ಸಮಾನಾಂತರವಾಗಿ ಪರಿಗಣಿಸಬಹುದು. | ಆಯೋಗದ ಅಧ್ಯಕ್ಷರ ವೇತನವನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:DPAR 20 SeloAa 2018, ದಿನಾಂಕ:26-09-2019 ರನ್ವಯ ರೂ.225000/-ಗಳಿಗೆ ಹೆಚ್ಚಿಸಲಾಗಿದೆ ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ:DPAR 64 SLA 2020, ದಿನಾಂಕ:16-07-2021ರನ್ವಯ ಸದಸ್ಯರ ವೇತನವನ್ನು ರೂ.205100/-ಗಳಿಗೆ ಹೆಚ್ಚಿಸಲಾಗಿರುತ್ತದೆ.<br>ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 01 ಹೆಚ್‌ಡಬ್ಲ್ಯೂಪಿ 2020, ದಿನಾಂಕ:23-11-2020ರನ್ವಯ ಕರ್ನಾಟಕ ರಾಜ್ಯ ಆದ್ಯತಾ ಸೂಚಿ ಪಟ್ಟಿಯನ್ನು ಮಾರ್ಪಾಡು ಮಾಡಿ ಕ್ರಮ ಸಂಖ್ಯೆ:17ರಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರು ಮತ್ತು ಕ್ರಮ ಸಂಖ್ಯೆ:25ರಲ್ಲಿ ಆಯೋಗದ ಸದಸ್ಯರುಗಳನ್ನು ಆದ್ಯತಾ ಸೂಚಿ ಪಟ್ಟಿಯಲ್ಲಿ ಇರಿಸಿ ಆದೇಶ ಹೊರಡಿಸಲಾಗಿರುತ್ತದೆ. |
| 62 | ಎರಡನೇ ಶಿಫಾರಸ್ಸು ಕರ್ನಾಟಕ ಲೋಕಸೇವಾ ಆಯೋಗದ ನೌಕರರನ್ನು ಸರ್ಕಾರ ಹಾಗೂ ಇತರ ಸಂಸ್ಥೆಗಳಿಗೆ ನಿಯೋಜಿಸುವುದಕ್ಕೆ ಸಂಬಂಧಿಸಿದೆ. ಪ್ರಸ್ತುತ, ರಾಜ್ಯ ಸರ್ಕಾರದ ಅಧಿಕಾರಿಯಾಗಿದ್ದು, ಕರ್ನಾಟಕ ಲೋಕಸೇವಾ ಆಯೋಗ, ಇವರನ್ನು ಹೊರತುಪಡಿಸಿ, ಇತರ ಸುಮರು 288 ಸಿಬ್ಬಂದಿಗಳು ಕರ್ನಾಟಕ ಲೋಕಸೇವಾ ಆಯೋಗದ ನೌಕರರಾಗಿದ್ದಾರೆ. ಈ ನೌಕರರ ಪೈಕಿ, ಕನಿಷ್ಟ ಶೇ.50ರಷ್ಟು ನೌಕರರನ್ನು ನಿಯೋಜನೆ ಮೇರೆಗೆ | ಕರ್ನಾಟಕ ಲೋಕಸೇವಾ ಆಯೋಗದ ಎಲ್ಲಾ ವರ್ಗದ ಶೇ.50ರಷ್ಟು ಹುದ್ದೆಗಳನ್ನು ಪ್ರತಿ ಬದಲಾವಣೆ (One-to-one basis) ಆಧಾರದ ಮೇಲೆ ನಿಯೋಜನೆ ಮಾಡುವ ಸಂಬಂಧ 1957ರ ಕರ್ನಾಟಕ ಲೋಕಸೇವಾ ಆಯೋಗ (ಸೇವಾ ಷರತ್ತುಗಳ) ವಿನಿಯಮಗಳಿಗೆ ಸಮಗ್ರ ತಿದ್ದುಪಡಿ ತರುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. |

| ಸಮಿತಿಯ ಶಿಫಾರಸ್ಸಿನಲ್ಲಿನ ಕ್ರಮ ಸಂಖ್ಯೆ | ಶಿಫಾರಸ್ಸು ಮಾಡಲಾದ ವಿಷಯ | ಶಿಫಾರಸ್ಸಿನಂತೆ ಮಾಡಲಾದ ತಿದ್ದುಪಡಿ |
| --- | --- | --- |
| | ಕಳುಹಿಸಿ, ರಾಜ್ಯ ಸರ್ಕಾರ/ಇತರ ಸಂಸ್ಥೆಗಳ ಸಿಬ್ಬಂದಿಗಳಿಂದ ಬದಲಾಯಿಸಬೇಕೆಂದು ಸಮಿತಿಯು ಅಭಿಪ್ರಾಯಿಸುತ್ತದೆ. ಈ ಬದಲಾವಣೆಯನ್ನು ಸೂಕ್ಷ್ಮ /ರಹಸ್ಯ ಮಾಹಿತಿಯನ್ನು ನಿರ್ವಹಿಸಲಾಗುತ್ತಿರುವ ಕರ್ನಾಟಕ ಲೋಕಸೇವಾ ಆಯೋಗದ ಗಣಕ ಶಾಖೆಯಲ್ಲಿ ತ್ವರಿತವಾಗಿ ಮಾಡಬಹುದಾಗಿದೆ. | |
| 63 | ಪ್ರಸ್ತುತ, ಕರ್ನಾಟಕ ಲೋಕಸೇವಾ ಆಯೋಗದ ಆವರಣದೊಳಗೆ ಹೊರಗಿನವರ ಪ್ರವೇಶಕ್ಕೆ ಅಷ್ಟೇನೂ ನಿರ್ಬಂಧವಿಲ್ಲ. ಈ ರೀತಿಯ ಹೊರಗಿನವರ ಅನಿರ್ಬಂಧಿತ ಪ್ರವೇಶವು ಕರ್ನಾಟಕ ಲೋಕಸೇವಾ ಆಯೋಗದ ವ್ಯವಸ್ಥೆ ಹಾಗೂ ಕಾರ್ಯವಿಧಾನದ ಗೌಪ್ಯತೆಗೆ ಹಾನಿಕಾರಕವಾಗುತ್ತದೆ ಹಾಗೂ ಇತರ ಅನಾರೋಗ್ಯಕರ ಆಚರಣೆಗಳಿಗೂ ಆಸ್ಪದ ನೀಡುತ್ತದೆ. ಸಮಿತಿಯು ಕೇಂದ್ರ ಲೋಕ ಸೇವಾ ಆಯೋಗದ, ನವದೆಹಲಿ, ಇಲ್ಲಿನ ಪ್ರವೇಶ ನಿಯಂತ್ರಣ ಮಾದರಿಯಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಆವರಣದಲ್ಲಿ ಕಟ್ಟುನಿಟ್ಟಾದ ಪ್ರವೇಶ ನಿಯಂತ್ರಣ ಮಾಡಬೇಕೆಂದು ಶಿಫಾರಸ್ಸು ಮಾಡುತ್ತದೆ. ಯಾವುದೇ ಅಭ್ಯರ್ಥಿಯನ್ನೊಳಗೊಂಡಂತೆ, ಯಾವುದೇ ಹೊರಗಿನವರು ಯಾವುದೇ ಕ್ರಮಬದ್ಧ ವಿಚಾರಣೆಗಾಗಿ ಕರ್ನಾಟಕ ಲೋಕಸೇವಾ ಆಯೋಗದ ಮುಖ್ಯ ಪ್ರವೇಶದಲ್ಲಿ ತೆರೆಯಲಾಗುವ ಸೌಲಭ್ಯ ಕೌಂಟರ್‌ನ್ನು ಸಂಪರ್ಕಿಸಬೇಕು. ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಇವರ ಲಿಖಿತ ಅನುಮತಿಯಿಲ್ಲದೇ, ಯಾವುದೇ ಹೊರಗಿನವರನ್ನು ಕರ್ನಾಟಕ ಲೋಕ ಸೇವಾ ಆಯೋಗದ ಆವರಣದೊಳಗೆ ಪ್ರವೇಶಿಸಲು ಅನುಮತಿಸಬಾರದು. ಕರ್ನಾಟಕ ಲೋಕ ಸೇವಾ ಆಯೋಗದಲ್ಲಿ ವಿವಿಧ ಪರೀಕ್ಷೆಗಳು ನಡೆಯುವ ದಿನದಂದು, ಅಭ್ಯರ್ಥಿಗಳು ತಮ್ಮ ಛಾಯಾಚಿತ್ರವಿರುವ ಕರೆ ಪತ್ರಗಳ ಆಧಾರದ ಮೇಲೆ ಪ್ರವೇಶ ಪಡೆಯಬಹುದು. | ಕರ್ನಾಟಕ ಲೋಕಸೇವಾ ಆಯೋಗದ ಆವರಣದಲ್ಲಿ ಕಟ್ಟುನಿಟ್ಟಾದ ಪ್ರವೇಶ ನಿಯಂತ್ರಣ ಮಾಡಬೇಕೆಂದು ಶಿಫಾರಸ್ಸು ಮಾಡುತ್ತದೆ. ಆದರಂತೆ ಆಯೋಗದ ಕಛೇರಿಗೆ ಸಾರ್ವಜನಿಕರ ಪ್ರವೇಶವನ್ನು ನಿರ್ಬಂಧಿಸಲಾಗಿದೆ. |
| 64 | ಕರ್ನಾಟಕ ಲೋಕಸೇವಾ ಆಯೋಗವು ಸಲಹೆಗಾರರು, ಪರೀಕ್ಷಕರು, ಕೇಂದ್ರ ಅಧೀಕ್ಷಕರು ಹಾಗೂ ಸಂವೀಕ್ಷಕರುಗಳಿಗೆ ಶುಲ್ಕ ಪಾವತಿಸಿರುವ ಕುರಿತಂತೆ ಕೆಲವು ಮನವಿಗಳನ್ನು ಸ್ವೀಕರಿಸಿದ್ದು, ಶುಲ್ಕ ಪರಿಷ್ಕರಿಸಲು ಹಾಗೂ ಉತ್ತರ ಪ್ರತಿಗಳ ಸಂಖ್ಯೆಗಳನ್ನು ಕಡಿಮೆ ಮಾಡಲು ಆಯೋಗಕ್ಕೆ ಸಂಪೂರ್ಣ ಅಧಿಕಾರವಿರುವುದರಿಂದ ಈ ಬಗ್ಗೆ ಕ್ರಮವಹಿಸುವ ಕುರಿತು ಸಮಿತಿಯು ನಿರೀಕ್ಷಿಸುತ್ತದೆ. | ಶಿಫಾರಸ್ಸಿನಂತೆ ಕ್ರಮವಹಿಸಲಾಗುತ್ತಿದೆ. |
| 65 | ಉನ್ನತ ಸಾಂವಿಧಾನಿಕ ಹುದ್ದೆಗಳಾದ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ನಿಷ್ಠೆ, ನ್ಯಾಯಯುತ ಹಾಗೂ ಬೌದ್ಧಿಕ ಸಾಮರ್ಥ್ಯವಿರುವ ವ್ಯಕ್ತಿಗಳಿಂದ ತುಂಬಬೇಕಾಗಿರುವುದರಿಂದ ಸದಸ್ಯ ಸಂಚಾಲಕರನ್ನಾಗಿ ಆಡಳಿತಾರೂಢ ಸರ್ಕಾರದ ಮುಖ್ಯ ಕಾರ್ಯದರ್ಶಿಯವರನ್ನು ಒಳಗೊಂಡ | ಈ ಪ್ರಸ್ತಾವನೆಯನ್ನು ಸರ್ಕಾರವು ಪರಿಗಣಿಸಿರುವುದಿಲ್ಲ. |

| ಸಮಿತಿಯ ಶಿಫಾರಸ್ಸಿನಲ್ಲಿನ ಕ್ರಮ ಸಂಖ್ಯೆ | ಶಿಫಾರಸ್ಸು ಮಾಡಲಾದ ವಿಷಯ | ಶಿಫಾರಸ್ಸಿನಂತೆ ಮಾಡಲಾದ ತಿದ್ದುಪಡಿ |
|---|---|---|
| | ಒಂದು ವ್ಯಾಪಕ ಆಧಾರಿತ ಹುಡುಕಾಟ ಸಮಿತಿಯನ್ನು ರಚಿಸಬೇಕು. ಸರ್ಕಾರದ ಹಿಂದಿನ ಮುಖ್ಯ ಕಾರ್ಯದರ್ಶಿ/ಭಾರತ ಸರ್ಕಾರದ ಹಿಂದಿನ ಕಾರ್ಯದರ್ಶಿ ಹಾಗೂ ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ನಿವೃತ್ತ ಅಥವಾ ಅಧಿಕಾರರೂಢ ನಿರ್ದೇಶಕರು ಮತ್ತು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ನಿವೃತ್ತ ಅಥವಾ ಅಧಿಕಾರರೂಢ ನಿರ್ದೇಶಕರು, ಕೇಂದ್ರ ವಿಶ್ವ ವಿದ್ಯಾಲಯದ ಉಪಕುಲಪತಿಗಳು ವ್ಯಾಪಕ ಆಧಾರಿತ ಹುಡುಕಾಟ ಸಮಿತಿಯ ಇತರ ಸದಸ್ಯರುಗಳಾಗಬಹುದು. ವ್ಯಾಪಕ ಆಧಾರಿತ ಹುಡುಕಾಟ ಸಮಿತಿಯು ಅಭ್ಯರ್ಥಿಗಳ ಸ್ವಯಂ ವಿವರಗಳನ್ನು ಪರಿಶೀಲಿಸಿ ಅಗತ್ಯವಿದ್ದಲ್ಲಿ ವೈಯಕ್ತಿಕ ಚರ್ಚೆ ಮೂಲಕ ಕರ್ನಾಟಕ ಲೋಕಸೇವಾ ಆಯೋಗದ ಒಂದು ಸದಸ್ಯ ಸ್ಥಾನಕ್ಕೆ ಇಬ್ಬರು ಅಭ್ಯರ್ಥಿಗಳ ಕಿರುಪಟ್ಟಿಯನ್ನು ಸಿದ್ಧಪಡಿಸಬೇಕು. ವ್ಯಾಪಕ ಆಧಾರಿತ ಹುಡುಕಾಟ ಸಮಿತಿಯು ಸೂಚಿಸುವ ಇಬ್ಬರು ಅಭ್ಯರ್ಥಿಗಳ ಪಟ್ಟಿಯಲ್ಲಿ ಒಬ್ಬರ ಹೆಸರನ್ನು ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರನ್ನಾಗಿ ಕರ್ನಾಟಕ ರಾಜ್ಯದ ರಾಜ್ಯಪಾಲರು ನೇಮಕಾತಿ ಮಾಡಲು ಮಾನ್ಯ ಮುಖ್ಯಮಂತ್ರಿಯವರು ನಾಮನಿರ್ದೇಶಿಸಲು ಇಚ್ಛಿಸಬಹುದು. ಸಾಮಾನ್ಯವಾಗಿ ಸರ್ಕಾರವು ಅನರ್ಹರೆಂದು ಪರಿಗಣಿಸದ ಹೊರತು ಹಿರಿಯರಾದ ಸದಸ್ಯರನ್ನು ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಬಹುದು. | |